ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಈ ಭೂಮಿಯು ಹಂಚಿಕೆ ಅಧಿಕಾರಿಗಳಿಂದ ನಡೆಯುತ್ತಿದ್ದಾಗ ನಿಧಾನವಾಗುತ್ತದೆಂದು, ಇತ್ತೀಚೆಗೆ ಈ ಸಮಿತಿಗಳನ್ನು ರಚಿಸಲಾಯಿತು. ಆದರೆ ಈ ಸಮಿತಿಗಳು ಭೂಮಿಯನ್ನು ಹಂಚಿತಕ್ಕ ವೇಳೆಯಲ್ಲಿ ಭಿನ್ನಾಭಿಪ್ರಾಯಗಳು ಬರುವುದು ಸಹಜ. ಈ ಭೂಮಿ ಹಂಚಿಕೆಯ ಕೆಲಸ ಆದಷ್ಟು ಶೀಘ್ರವಾಗಿ ಆಗುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಂಡು ಬೇಗ ಫಿಲೇವಾರಿ ಆಗುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಈಗತಾನೆ ಅಲ್ಲಿ ಮೂರು ಸಾವಿರ ಚಿಲ್ಲರೆ ಎಕರೆ ಭೂಮಿ ವಿತರಣೆಯಾಗತಕ್ಕದ್ದು ಇವೆ ಎಂದು ಹೇಳಿದರು. ಹಾಗಿರುವಾಗ ಇಲ್ಲಿ ಹಂಚಿರತಕ್ಕ ಭೂಮಿಯನ್ನು ನೋಡಿದರೆ ಬಹಳ ಕಡಮೆ ಇದೆ; ಇದಕ್ಕೆ ಕಾರಣ ಆ ಸಮಿತಿಯವರು ಕೂಡಿದ್ದೇ ಬಹಳ ಕಡಮೆಯೋ ಅಥವಾ ಅಲ್ಲಿ ಇರತಕ್ಕ ಭೂಮಿನೇ ಕಡಮೆಯೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನಾನಾಗಲೇ ಹೇಳಿದಹಾಗೆ ಅಲ್ಲಿ ಇರತಕ್ಕ ಭೂಮಿ 3841 ಎಕರೆಗಳು. ಅದರಲ್ಲಿ ರೈಲ್ವೆ ಲೈನು ಬರುತ್ತದೆಂದು 723 ಎಕರೆಗಳನ್ನು ರಿಜರ್ವ್ ಮಾಡಿದೆ. ಅದರ ಜೊತೆಗೆ ಟೌನ್ ಎಕ್ಸ್‌ಟೆನ್‌ಷನ್‌ಗಾಗಿ 113 ಎಕರೆಗಳನ್ನು ರಿಜರ್ವ್ ಮಾಡಲಾಗಿದೆ. ಉಳಿದ ಭೂಮಿಯನ್ನು ವಿತರಣೆ ಮಾಡುವುದಕ್ಕೆ ಸಮಿತಿಗಳನ್ನು ರಚನೆ ಮಾಡುವುದಕ್ಕೆ ಸ್ವಲ್ಪಕಾಲ ಹಿಡಿಯಿತು. ಆದರೆ ಈ ಸಮಿತಿಗಳು ರಚನೆಯಾಗುವುದಕ್ಕೆ ಪೂರ್ವದಲ್ಲಿ ಕೇವಲ ಐದುತಿಂಗಳ ಕಾಲದಲ್ಲಿ 1114 ಎಕರೆ ಭೂಮಿಯನ್ನು ಹಂಚಲಾಗಿತ್ತು. ಈ ಸಮಿತಿ ಬಂದ ನಂತರ 6 ತಿಂಗಳ ಅವಧಿಯಲ್ಲಿ ವಿತರಣೆಯಾಗಿರತಕ್ಕ ಜಮೀನು 263 ಎಕರೆಗಳು ಮಾತ್ರ. ಆದರೆ ಸಮಿತಿಯಲ್ಲೂ ಕೂಡ ಭಿನ್ನಾಭಿಪ್ರಾಯಗಳು ಬಂದೇ ಬರುತ್ತವೆ. ಮೊದಲು ಸಮಿತಿಗಳನ್ನು ಮಾಡಿದ ತರುವಾಯದಲ್ಲಿ ಸ್ವಲ್ಪ ನಿಧಾನವಾಯಿತು. ಆದರೆ ಇತ್ತೀಚೆಗೆ ಇವು ಕ್ರಮವಾಗಿ ಕೆಲಸ ಮಾಡುತ್ತಿವೆ. ಆದರೆ ಭೂಮಿಗಾಗಿ ಬಂದು ಗ್ರಾಮದಲ್ಲಿ ಹತ್ತು ಜನರು ಅರ್ಜಿ ಹಾಕಿದ್ದರೆ ಅವರಲ್ಲಿ ಯಾರಿಗಾದರೂ ಅವರ ಸಂಸಾರದಲ್ಲಿ ಜಮೀನಿರತಕ್ಕವರಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಿ ಭೂಮಿಯನ್ನು ಹಂಚಲಾಗುತ್ತಿದೆ. ಆದರೆ ಇನ್ನು ಮುಂದಕ್ಕೆ ಹೀಗೆ ನಿಧಾನವಾಗುವುದಕ್ಕೆ ಅವಕಾಶವಿಲ್ಲದಂತೆ ವಿತರಣೆ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತದೆ.

ಶ್ರೀ ಎಂ. ಚಿಕ್. ಜಯಪ್ರಕಾಶನಾರಾಯಣ.—ಮಾನ್ಯ ಸಚಿವರು ಅಲ್ಲಿ ವಿತರಣೆಮಾಡಲು 3841 ಎಕರೆ ಭೂಮಿ ಇದೆಯೆಂದು ಹೇಳಿದ್ದರೂ ಕಾರ್ವಾರ, ಅಂಕೋಲ, ಸಿದ್ದಾಪುರ ತಾಲ್ಲೂಕುಗಳಲ್ಲಿ ಒಂದು ಎಕರೆ ಭೂಮಿಯನ್ನಾದರೂ ಹಂಚದಿರುವುದಕ್ಕೆ ಏನು ಕಾರಣ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಿದ್ದಾಪುರದಲ್ಲಿ ವಿತರಣೆಯಾಗಿರತಕ್ಕ ಭೂಮಿ 27 ಎಕರೆ ಮತ್ತು 7 ಗುಂಟೆ; ಸಿರ್ಸಿ ತಾಲ್ಲೂಕಿನಲ್ಲಿ 243 ಎಕರೆ 11 ಗುಂಟೆ; ಕುಮಟಾದಲ್ಲಿ 131 ಎಕರೆ 31 ಗುಂಟೆ; ಅಂಕೋಲಾದಲ್ಲಿ 41 ಎಕರೆ 31 ಗುಂಟೆ; ಹೊನ್ನಾವರದಲ್ಲಿ 24 ಎಕರೆಗಳು; ಎಲ್ಲಾಪುರ ತಾಲ್ಲೂಕಿನಲ್ಲಿ 46 ಎಕರ 7 ಗುಂಟೆ; ಹಲಿಯಾಳದಲ್ಲಿ 50 ಎಕರೆ 10 ಗುಂಟೆ; ಮುಂಡಗೋಡು ತಾಲ್ಲೂಕಿನಲ್ಲಿ 236 ಎಕರೆ 1 ಗುಂಟೆ; ಸೂಪಾ ತಾಲ್ಲೂಕಿನಲ್ಲಿ 129 ಎಕರೆಗಳು; ಹೀಗೆ ಭೂಮಿಯನ್ನು ವಿತರಣೆಮಾಡಲಾಗಿದೆ. ಇನ್ನು ಮುಂದೆ ಆ ಸಮಿತಿಯವರು ತಿಂಗಳಲ್ಲಿ 2—3 ಸಾರಿ ಸೇರಿ ಇದನ್ನು ಇನ್ನೂ ಬೇಗ ಬೇಗ ತೀರ್ಮಾನ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಲಾಗುತ್ತದೆ.

Lorry Accident on 22-3-1973 Between Yeshwanthanagar and Sandur

960. Sri B. SATYANARAYANASINGH (Hospet).—

Will the Chief Minister be pleased to state :—

(*a*) whether the Government is aware of the lorry accident that occurred on 22nd March 1973 between Yeshwanthanagar and Sandur killing eight persons and injuring fifteen persons ;

(*b*) whether Government is aware that incidence of such accidents in this area is on increase ; if so, the number of accidents that occurred

(SRI B SATYANARAYANA SINGH)

in Sandur Area during 1972-73 and the number of persons that died; whether any compensation has been paid to victims and near relatives of deceased;

(c) the reasons for such accidents and the steps taken by Government to avert accidents in that area?

Sri H. M. CHANNABASAPPA (Minister for Public Works and Electricty) [on behalf of SRI D. DEVARAJ URS (Chief Minister)].—

(a) Yes.

(b) The incidence of such accidents in this area is not on the increase.

The total number of Motor vehicles accidents in Sandur area that occurred during the years 1972 and 1973 are 11 and 4 respectively and the number of persons who died in those accidents are 8 and 2 respectively.

No compensation has been paid to the victims and near relatives of the deceased.

(c) The accidents are attributable to a variety of reasons. Among the important reasons are (1) mechanical defects and mechanical failure of the vehicles and (2) human error in judgement, either due to lack of expertise or due to consumption of intoxcating liquors.

The following steps uave been taken to avert accidents in that area :—

(1) Surprise checking of motor vehicles has been organised by the local Police.

(2) Speed traps have also been conudcted on that road by the Local Police.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—17 ಜನರು ಸತ್ತ ಈ ದುರ್ಘಟನೆಗೆ ಮುಖ್ಯ ಕಾರಣ, ಆ ಗಣಿಯ ಮಾಲೀಕರು ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡ ಬೇಕೆಂಬ ಕಾನೂನಿನ ನಿರ್ಬಂಧವಿದ್ದರೂ ಅವರು ಅದನ್ನು ಕಲ್ಪಿಸದಿರುವುದರಿಂದ, ಆ ಜನರು ಆ ಲಾರಿಯಲ್ಲಿ ಪ್ರಯಾಣ ಮಾಡಬೇಕಾಯಿತು. ಅದೇ ಕಾರಣದಿಂದ ಅವರು ಸತ್ತಿದ್ದಾರೆ. ಆದರೆ ಆ ಗಣಿ ಮಾಲೀಕರು ಕಾರ್ಮಿಕರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಡದಿದ್ದ ಬಗ್ಗೆ ಸರ್ಕಾರ ದವರು ಏನು ಕ್ರಮ ಕೈಗೊಂಡಿದ್ದಾರೆ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವುದಕ್ಕೂ ಮತ್ತು ಅಲ್ಲಿ ಲಾರೀ ಆಕ್ಸಿಡೆಂಟಾಗಿರುವುದಕ್ಕೂ ಏನೂ ಸಂಬಂಧ ಕಾಣುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಲಾರಿ ಮತ್ತು ಹ್ಯೂಮನ್ ಡಿಫೆಕ್ಟ್ಸ್ ಯಾವುದೂ ಇರಲಿಲ್ಲ. ಆದರೆ ಆ ಕಾರ್ಮಿಕ ವರ್ಗಕ್ಕೆ ವಸತಿ ಸೌಕರ್ಯಗಳನ್ನು ಗಣೀ ಮಾಲೀಕರು ಕಲ್ಪಿಸಿ ಕೊಟ್ಟಿದ್ದರೆ ಆ ಕಾರ್ಮಿಕರು ಆ ದಿವಸ ಲಾರಿಯಲ್ಲಿ ಬರಬೇಕಾದ ಅಗತ್ಯವಿರುತ್ತಿರಲಿಲ್ಲ. ಆ ವಸತಿ

ಸೌಕರ್ಯವಿಲ್ಲದಿದ್ದ ಕಾರಣ ಅವರು ಲಾರಿಯಲ್ಲಿ ಬರಬೇಕಾಗಿದ್ದರಿಂದ ಅವರು ಆ ಆಕ್ಸಿಡೆಂಟಿಗೆ ಸಿಕ್ಕ ಬೇಕಾಯಿತು. ಆದುದರಿಂದ ಅವರಿಗೆ ಅಲ್ಲಿ ವಸತಿ ಸೌಕರ್ಯಗಳನ್ನು ನಿರ್ಮಿಸಿ ಕೊಡುವಂತೆ ಮಾಡುವುದಕ್ಕೆ ಸರ್ಕಾರದವರು ಏನು ಕ್ರಮಗಳನ್ನು ಕೈಗೊಂಡಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊಟ್ಟಮೊದಲನೆಯದಾಗಿ ಅಲ್ಲಿ 17 ಜನರು ಸತ್ತಿದ್ದಾರೆಂಬುದು ಸರಿಯಲ್ಲ. ಅಲ್ಲಿ 5 ಜನರು ಸತ್ತಿದ್ದಾರೆಂದೂ 15 ಜನರು ಗಾಯಗೊಂಡಿದ್ದು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದೂ ನನ್ನಲ್ಲಿ ವರದಿಯಿದೆ. ಆದುದರಿಂದ ಒಂದನೆಯದಾಗಿ ಅಲ್ಲಿ 17 ಜನರು ಸತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ಇನ್ನು ಎರಡನೆಯದಾಗಿ—ಲಾರಿಯು ಮೈನ್ ರೋಡಿನಲ್ಲಿ ಹೋಗುತ್ತಿದ್ದಾಗ ಮೂರನೇ ಕರ್ವಿನಲ್ಲಿ ಡ್ರೈವರಿಗೆ ಕಂಟ್ರೋಲ್ ತಪ್ಪಿತು. ಆ ಲಾರಿಯಲ್ಲಿ ಸುಮಾರು 20—25 ಜನರು ಕುಳಿತಿದ್ದರು. ಮುಂದೆ ಕ್ಯಾಬಿನ್ನಿನಲ್ಲಿ 3 ಜನ ಡ್ರೈವರ್ ಮತ್ತು ಕಂಡಕ್ಟರ್ ಇಷ್ಟು ಜನರು ಕುಳಿತಿದ್ದರು. ಆ ಆಕ್ಸಿಡೆಂಟಿನಲ್ಲಿ ಐದು ಜನರು ಸತ್ತು 15 ಜನರು ಗಾಯಗೊಂಡರೆಂದು ತಿಳಿಸಬಯಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಾರ್ಮಿಕರಿಗೆ ಪೋಲೀಸಿನವರಾಗಲಿ ಸರ್ಕಾರದವರಾಗಲಿ ಯಾರು ಪರಿಹಾರವನ್ನೇ ಕೊಡಿಸಿಲ್ಲ. ಕಾನೂನಲ್ಲಿ ಅವಕಾಶವಿದ್ದರೂ ಇಷ್ಟು ನಿಧಾನವಾಗುವುದಕ್ಕೆ ಏನು ಕಾರಣ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸತ್ತು ಹೋದವರು ಕಾರ್ಮಿಕರಾಗಲಿ ಯಾರೇ ಆಗಿರಲಿ ಶಾಸನದ ಪ್ರಕಾರ ಅವರ ಬಗ್ಗೆ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಿಸುವುದಕ್ಕೆ ನೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—(ಎ) ಪ್ರಶ್ನೆಗೆ ಉತ್ತರವಾಗಿ "ಎಸ್" ಎಂದು ತಿಳಿಸಲಾಗಿದೆ. ಅಂದರೆ 8 ಜನ ಸತ್ತಿರುವುದನ್ನು ಮತ್ತು 15 ಜನರಿಗೆ ಗಾಯವಾಗಿರುವುದನ್ನು ಒಪ್ಪಿದಂತಾಯ್ತು ಆದರೆ ಈಗತಾನ್ 5 ಜನರು ಸತ್ತರು ಎಂದು ಹೇಳಿದರು. ಇದರಲ್ಲಿ ಯಾವುದು ಸರಿ?

9-30 P. M.

Sri H. M. CHANNABASAPPA.—Sorry, I stand corrected. Out of 8 people, five people died on the spot.

Election to the Ramanagaram Municipal Council

Sri B. PUTTASWAMAIAH (Ramanagaram).—

652. Will the Minister for Municipal Administration be pleased to state :—

(*a*) when the Ramanagaram Municipal Council election was held ;

(*b*) whether the High Court has ordered recently to conduct the election ;

(c) whether Government has implemented the Order of the High Court ;

(*d*) if not, the action taken by Government to conduct the election ?